೧೯. ಬೀದರ್ ಜಿಲ್ಲೆ.—

೧೭೧)	ಔರಾದ್	೯	೭	೨	೨	—	೧
೧೭೨)	ಬಸವ ಕಲ್ಯಾಣ	೮	೬	೧	೨	—	೧
೧೭೩)	ಭಾಲ್ಕಿ	೧೧	೬	೧	೧	—	೧
೧೭೪)	ಬೀದರ್	೯	೧೨	೩	೨	೧	೩
೧೭೫)	ಹುಮ್ನಾಬಾದ್	೧೪	೭	೫	—	—	೮
		೫೧	೩೮	೧೨	೬	೧	೭
ಒಟ್ಟು ಸರ್ಕಾರಿ ಪ್ರೌಢಶಾಲೆಗಳು		೧೧೪೪	೨೦೫೪	೨೯೨	೨೭೯	—	—

ವೈ. ಎಸ್. ಸಂಬ್ರಮಣ್ಯ ಚಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ವಿವಿಧ ದರ್ಜೆಯ ಹತ್ತಿಯ ಬೆಲೆ

೧೪೫೦ ಶ್ರೀ ಪಿ. ರಾಮಚಂದ್ರರಾವ್(ಉಳ್ಳಾಲ) ಮತ್ತು ಶ್ರೀ ಎಸ್. ಸೂರ್ಯನಾರಾಯಣ ರಾವ್(ವರ್ತೂರು) ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವೈಜ್ಞಾನಿಕವಾಗಿ ಲೆಕ್ಕಿಸಿದ ನೀರಾವರಿ ಮತ್ತು ಒಣ ಬೇಸಾಯದ ಹತ್ತಿಯ ಪ್ರಗತಿ ಕ್ವಿಂಟಾಲ್ ಉತ್ಪಾದನಾ ವೆಚ್ಚವೆಷ್ಟು ?

ಆ) ಈಗ ರೈತರ ವಿವಿಧ ದರ್ಜೆಯ ಹತ್ತಿಗಳಿಗೆ ದೊರೆಯುತ್ತಿರುವ ಬೆಲೆ ಏನು ?

ಇ) ಉತ್ಪಾದನಾ ವೆಚ್ಚ ಮತ್ತು ರೈತರಿಗೆ ದೊರೆಯುತ್ತಿರುವ ಬೆಲೆಗಳ ಅಂತರವನ್ನು ಇಲ್ಲವಾಗಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಈ) ವಂಹಾರಾಷ್ಟ್ರ ಸರ್ಕಾರದವರ ರೀತಿಯಲ್ಲಿ ಕರ್ನಾಟಕದ ರೈತರು ಉತ್ಪಾದಿಸಿದ ಎಲ್ಲಾ ಹತ್ತಿಯನ್ನು ಕೊಳ್ಳುವ ಏಕಸ್ವಾಮ್ಯ ವ್ಯವಸ್ಥೆಯನ್ನು ನಿರ್ಮಿಸುವ ಭರವಸೆಯನ್ನು ಸರಕಾರದವರು ನೀಡುವರೇ ?

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು).—

ಅ) ಪ್ರತಿ ಕ್ವಿಂಟಾಲ್ ಉತ್ಪಾದನಾ ವೆಚ್ಚವು ನೀರಾವರಿ ಆಶ್ರಯದಲ್ಲಿ ೪೦೨.೪೭ ರೂಪಾಯಿಂಗಳು ಮತ್ತು ಮಳೆ ಆಶ್ರಯದಲ್ಲಿ ೩೧೧.೪೫ ರೂಪಾಯಿಗಳಾಗಿರುವುದು.

ಆ) ದಿನಾಂಕ ೨-೩-೮೪ರಂದು ವಿವಿಧ ದರ್ಜೆಯ ಹತ್ತಿಯ ಮಾರುಕಟ್ಟೆ ಬೆಲೆಗಳು ಈ ರೀತಿ ಇದ್ದವು.

(ಪ್ರತಿ ಕ್ವಿಂಟಾಲಿಗೆ ರೂಪಾಯಿಂಗಳಲ್ಲಿ)

	ಕನಿಷ್ಠ	ಗರಿಷ್ಠ
ಅ) ಲಕ್ಷ್ಮಿ	೫೧೦	೫೭೨
ಆ) ಹಂಪ	೫೦೬	೬೦೬
ಇ) ಜಯಧರ	೪೦೧	೫೦೯
ಈ) ವರಲಕ್ಷ್ಮಿ	೫೯೫	೬೯೯
ಉ) ಜಯಲಕ್ಷ್ಮಿ	೫೫೦	೬೮೦
ಊ) ಶಾರದ	೪೮೦	೫೮೦

ಇ) ಹತ್ತಿಯ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ನಿಗದಿಪಡಿಸುವುದು. ಭಾರತೀಯ ಹತ್ತಿ ನಿಗಮವು ವಿದೇಶಿ ಮತ್ತು ಸ್ಥಳೀಯ ಬೇಡಿಕೆಗನುಗುಣವಾಗಿ ಹತ್ತಿಯನ್ನು ಖರೀದಿಸುತ್ತದೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಹತ್ತಿಯ ರಫ್ತಿನ ಮೇಲಿನ ನಿರ್ಬಂದವನ್ನು ತೆಗೆಯಬೇಕೆಂದು ಕೋರಿದೆ ಅಲ್ಲದೇ, ಬೆಲೆಯ ಸ್ಥಿರತೆಯನ್ನು ಕಾಪಾಡಲು, ಭಾರತ ಹತ್ತಿ ನಿಗಮದ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಹತ್ತಿಯನ್ನು ಕೊಳ್ಳಲು ಒತ್ತಾಯಿಸಲಾಗುತ್ತಿದೆ.

ಈ) ಇದನ್ನು ಪರಿಗಣಿಸಲಾಗುವುದು.

ಹುಮನಾಬಾದ್‌ನ ಬಾಲಕಿಯರ ಪ್ರೌಢಶಾಲೆಗೆ ಹೊಸದಾಗಿ ಕಟ್ಟಡವನ್ನು ನಿರ್ಮಿಸುವುದು.

೧೧೧೨ ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್) ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹುಮ್ನಾಬಾದಿನಲ್ಲಿ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ದುಸ್ಥಿತಿಯಲ್ಲಿರುವ ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಶಾಲೆಗೆ ಕಟ್ಟಡ ಒದಗಿಸಲು ಸರ್ಕಾರ ಯಾವಾಗ ಸೂಕ್ತ ಕ್ರಮ ಕೈಗೊಳ್ಳುವುದು ?

ಶ್ರೀ ಬಿ. ರಾಚಯ್ಯ(ಮಾನ್ಯ ಶಿಕ್ಷಣ ಸಚಿವರು).—

ಅ) ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವುದು ತಿಳಿದಿದೆ. ದುಸ್ಥಿತಿಯ ಬಗ್ಗೆ ವರದಿ ಇಲ್ಲ.

ಆ) ಭೂ ವಿವಾದದಿಂದ ಕಟ್ಟಡ ನಿರ್ಮಾಣಕ್ಕೆ ನ್ಯಾಯಲಯದಿಂದ ೧೯೭೭ರಲ್ಲಿ ಅಡಿಗಲ್ಲು ಇಟ್ಟಿದ್ದರೂ, ನಿರ್ಮಾಣ ಸಾಧ್ಯವಾಗಲಿಲ್ಲ. ಬೇರೆ ಜಾಗ ದೊರೆತ ಕೂಡಲೇ ನಿರ್ಮಾಣಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಸಾಕಷ್ಟು ಹಣವನ್ನು ಒದಗಿಸಲಾಗುವುದು.

ಹತ್ತಿಗೆ ಲಾಭ ದಾಯಕ ಬೆಲೆ

೧೧೭೪ ಶ್ರೀ ಪಿ. ರಾಮಚಂದ್ರರಾವ್(ಉಳ್ಳಾಲ) ಮಾನ್ಯ ಕೃಷಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ವೈಜ್ಞಾನಿಕವಾಗಿ ಲೆಕ್ಕಾಚಾರ ಮಾಡಿದ ನೀರಾವರಿ ಮತ್ತು ಒಣ ಬೇಸಾಯದ ಹತ್ತಿಯ ಪ್ರತಿ ಕ್ವಿಂಟಾಲ್ ಉತ್ಪಾದನಾ ವೆಚ್ಚವೆಷ್ಟು?

ಆ) ಹಾಲಿ ರೈತರಿಗೆ ವಿವಿಧ ದರ್ಜೆಯ ಹತ್ತಿಗೆ ದೊರೆಯುತ್ತಿರುವ ಬೆಲೆ ಏನು ?

ಇ) ಉತ್ಪಾದನಾ ವೆಚ್ಚ ಮತ್ತು ರೈತರಿಗೆ ದೊರೆಯುತ್ತಿರುವ ಬೆಲೆಗಳ ಅಂತರವನ್ನು ಸರಿದೂಗಿಸುವ ಸಲುವಾಗಿ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಈ) ಮಹಾರಾಷ್ಟ್ರ ಸರ್ಕಾರ ರೀತಿಯಲ್ಲಿ ಕರ್ನಾಟಕದ ರೈತರು ಉತ್ಪಾದಿಸಿದ ಎಲ್ಲಾ ಹತ್ತಿಯನ್ನು ಕೊಳ್ಳುವ ಏಕಸ್ವಾಮ್ಯ ವ್ಯವಸ್ಥೆಯನ್ನು ನಿರ್ಮಿಸುವ ಭರವಸೆಯನ್ನು ಸರ್ಕಾರದವರು ನೀಡುವರೇ ?

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು).—

ಅ) ಪ್ರತಿ ಕ್ವಿಂಟಲ್ ಹತ್ತಿಯ ಉತ್ಪಾದನಾ ವೆಚ್ಚವು ನೀರಾವರಿ ಆಶ್ರಯದಲ್ಲಿ ೪೦೨.೪೭ ರೂಪಾಯಿಗಳು ಮತ್ತು ಮಳೆ ಆಶ್ರಯದಲ್ಲಿ ೩೧೦.೪೫ ರೂಪಾಯಿಗಳಾಗಿರುವುದು.

ಆ) ದಿನಾಂಕ ೨-೩-೮೪ ರಂದು ವಿವಿಧ ದರ್ಜೆಯ ಹತ್ತಿಯ ಮಾರುಕಟ್ಟೆ ಬೆಲೆಗಳು ಈ ರೀತಿ ಇದ್ದವು.

(ಪ್ರತಿ ಕ್ವಿಂಟಾಲಿಗೆ ರೂಪಾಯಿಗಳಲ್ಲಿ)

	ಕನಿಷ್ಠ	ಗರಿಷ್ಠ
ಅ) ಲಕ್ಷ್ಮಿ	೫೧೦	೫೭೨
ಆ) ಹಂಪ	೫೦೬	೬೦೬